ಡಾಕ್ಟರರಿಗೆ ಹೇಳಿದಳು. ''ಡಾಕ್ಟರ್, ನೀವು ಹೊಸಬರಾದ್ದರಿಂದ ನಿಮಗೆ ತಿಳಿಯದು. ಇವರು ಅಪ್ಪಾ ಸಾಹೇಬರು. ಈ ನಗರದ ಜನಗಳೆಲ್ಲ ಗೌರವಿಸುವ ವ್ಯಕ್ತಿ. ಇವರೇ ಸ್ಥಾಪಿಸಿದ ಆಸ್ಪತ್ರೆಯನ್ನು ಟ್ರಸ್ಟ್ ಒಂದು ನಡೆಸುತ್ತಿದೆ. ಜನಸಾಮಾನ್ಯನಿಗೆ ಸಿಗುವ ಚಿಕಿತ್ಸೆ ತನಗೆ ಸಾಕು ಎಂದು ಈ ಸರಕಾರೀ ಆಸ್ಪತ್ರೆ ಸೇರಿಕೊಂಡಿದ್ದಾರೆ'' ಚಕಿತರಾದ ಡಾಕ್ಟರರು, 'ಈ ಕಾಲದಲ್ಲಿ ಇಂಥವರೂ ಇದ್ದಾರೆಯೆ?' ಎಂದು ತಮ್ಮಷ್ಟಕ್ಕೇ ಹೇಳಿಕೊಂಡರು.

''ಪ್ರಾಯಶ್ಚಿತ್ತ'' ಎಂದೇನೊ ಹೇಳಿದರು. ಆದರೆ ತಾನು ಉಪವಾಸ ಕೈಕೊಂಡದ್ದರಿಂದ, ಬಲಾತ್ಕಾರಕ್ಕೊಳಗಾದ ಆ ಹೆಣ್ಣುಮಗಳ ಜೀವನ ಮೊದಲಿನಂತಾಗಲು ಸಾಧ್ಯವೆ? ತಾನೇ ನಡೆಸುವ ಅನಾಥ ಹೆಣ್ಣುಮಕ್ಕಳ ಆಶ್ರಯ ತಾಣದಲ್ಲಿ ಪಾಪಿ ಏನು ಮಾಡಿಬಿಟ್ಟ! ತಾನೇ ಸಾಕಿ ಸಲಹಿದ ಅನಾಥನಾಗಿದ್ದ ಹುಡುಗ, ಒಂಟಿ ಸಲಗದಂತೆ ಹೀಗೆ ಬೇಕಾಬಿಟ್ಟಿ ವರ್ತಿಸುವಂತಾದನಲ್ಲ! ಇದಕ್ಕೆ ತಾನೂ ಪರೋಕ್ಷವಾಗಿ ಹೊಣೆಯಲ್ಲವೆ? ಎಂದು ಕಣ್ಣಂಚಿನಲ್ಲಿ ನೀರು ತಂದುಕೊಂಡ ಅಪ್ಪಾ ಸಾಹೇಬರು ಹಿಂದಿನ ಘಟನೆಗಳನ್ನು ನೆನಪಿಸಿಕೊಂಡರು.

ಎರಡು ಮೂರು ವರ್ಷದ ಮಗುವಿನೊಂದಿಗೆ ಬೈಖಾಲಾದ ರಸ್ತೆ ಬದಿಯಲ್ಲಿ ಕಾಣಸಿಕೊಂಡ ಆ ಮಹಿಳೆ, ''ನನ್ನನ್ನು ಆಸ್ಪತ್ರೆಗೆ ಸೇರಿಸಿ'' ಎಂದು ದಾರಿಯಲ್ಲಿ ಹೋಗುವವರನ್ನು ಬೇಡುತ್ತಿದ್ದಳು. ಯಾರೂ ಆಕೆಯ ರೋದನದ ಬೇಡಿಕೆಗೆ ಗಮನಕೊಡಲಿಲ್ಲ. ಯಾವುದೋ ಕೆಲಸದ ಮೇಲೆ ಅತ್ತ ಬಂದ ಅಪ್ಪಾ ಸಾಹೇಬರು ಆಕೆಯ ಹಣೆ ಮುಟ್ಟಿ ನೋಡಿದಾಗ ಅದು ಕಾದ ಹಂಚಿನಂತಾಗಿತ್ತು. ಮಗು ಒಂದೇ ಸವನೆ ಅಳುತ್ತಿತ್ತು. ಅಪ್ಪಾ ಸಾಹೇಬರು ತಡಮಾಡದೆ ಆಕೆಯನ್ನು ಸಮೀಪದ ಆಸ್ಪತ್ರೆಗೆ ಸೇರಿಸಿದರು. ಆದರೆ, ಆಕೆ ಉಳಿಯಲಿಲ್ಲ. ತೋಳಿನಲ್ಲಿ ವಾಘ್ಮೊರೆ ಎಂದು ಹಚ್ಚೆ ಹಾಕಿಸಿಕೊಂಡದ್ದನ್ನು ನೋಡಿದ ಅಪ್ಪಾ ಸಾಹೇಬರು ಮಗುವನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಅವನಿಗೆ ಸುಭಾಷ್ ವಾಘ್ಮೊರೆ ಎಂದು ಹೆಸರಿಸಿದರು. ತನ್ನ ಸ್ವಂತ ಮಗನಂತೆ ಸಾಕಿದ ವಾಘ್ಮೊರೆ ಈಗ ಪ್ರಳಯಾಂತಕನಂತೆ ವರ್ತಿಸುತ್ತಿದ್ದಾನೆ.

ಡಾಕ್ಟರರು ಬಂದಾಗ ಅಪ್ಪಾ ಸಾಹೇಬರ ಯೋಚನಾ ಲಹರಿಗೆ ಭಂಗ ಉಂಟಾಯಿತು. ಡಾಕ್ಟರರು ಅಪ್ಪಾ ಸಾಹೇಬರ ಲ್ಯಾಬ್ ರಿಪೋರ್ಟನ್ನು ಮಂಚದಲ್ಲಿರುವ ಫೈಲಿನೊಳಗೆ ಸೇರಿಸಿ, ''ಸರ್, ನಿಮ್ಮ ಆರೋಗ್ಯದಲ್ಲಿ ಕಾಂಪ್ಲಿಕೇಶನ್ ಇದೆ. ಹಿಮೋಗ್ಲೋಬಿನ್ ತೀರಾ ಕೆಳಮಟ್ಟದಲ್ಲಿದೆ. ಸೋಡಿಯಮ್–ಪೊಟ್ಯಾಶಿಯಮ್ ಇಂಬ್ಯಾಲನ್ಸ್ ಇದೆ. ವೈಟಲ್ ಆರ್ಗನ್ಸ್ ಎಲ್ಲ ಸರಿಯಾಗಿ ಕೆಲಸ ಮಾಡುತ್ತಿದ್ದರೂ ಕ್ರಿಯೊಟಿನಿನ್ ಲೆವೆಲ್ ತುಸು ಮೇಲ್ಮಟ್ಟದಲ್ಲಿರುವುದರಿಂದ ಕಿಡ್ನಿಯ ಕೆಲಸದ ಸರಿಯಾದ ತಪಾಸಣೆ ನಡೆಸಬೇಕಿದೆ. ನೆಫ್ರಾಲಜಿಸ್ಟರನ್ನು ಕರೆಸಿ, ಅವರಿಂದ ಹೆಚ್ಚಿನ ಮಾಹಿತಿ ಪಡೆದು ಚಿಕಿತ್ಸೆ ಕೈಗೊಳ್ಳಬೇಕಾಗುತ್ತದೆ. ಹೀಗಾಗಿ, ನಿಮ್ಮ ಆಸ್ಪತ್ರೆಯ ವಾಸ ನನ್ನ ಊಹೆಯ ಪ್ರಕಾರ ಸ್ವಲ್ಪ ದೀರ್ಘವಾಗಬಹುದು'' ಎನ್ನುತ್ತ ಅಪ್ಪಾ ಸಾಹೇಬರ ಪ್ರತಿಕ್ರಿಯೆಗೆ ಕಾದರು. ಅಪ್ಪಾ ಸಾಹೇಬರು, ''ಈ ಮುದಿ ಜೀವ ಬಿದ್ದು ಹೋದರೆ ಯಾರಿಗೆ ನಷ್ಟ ಹೇಳಿ ಡಾಕ್ಟರ್. ಹೆಂಡತಿ ಮಕ್ಕಳು ನನಗಿಲ್ಲ. ಈವರೆಗೆ ಸಾಧ್ಯವಾದಷ್ಟು, ನನ್ನ ಕೈಲಾದಷ್ಟು ಜನಸೇವೆ ಮಾಡಿದ್ದೇನೆ. ನಾನು ಗತಿಸಿದರೆ ನನ್ನಿಂದ ಉಪಕೃತರಾದವರು ನಾಲ್ಕು ಹನಿ ಕಣ್ಣೀರು ಸುರಿಸಿಯಾರು, ಅಷ್ಟೆ. ನನಗೆ ಡಿಸ್ಚಾರ್ಜ್ ಕೊಟ್ಟು ಬಿಡಿ. ಉಸಿರು ನಿಲ್ಲುವವರೆಗೆ ನನ್ನ ಕಾಯಕ ಮುಂದುವರಿಸುತ್ತೇನೆ'' ಎಂದು ನಿರ್ಭಾವುಕರಾಗಿ ನುಡಿದಾಗ, ಡಾಕ್ಟರರು ಹೇಳಿದರು, ''ಸರ್, ನಿಮಗೆ ಈಗ ಡಿಸ್ಚಾರ್ಜ್ ಸಿಗುವಂತಿಲ್ಲ. ನೀವು ಖಂಡಿತವಾಗಿ ಪೂರ್ತಿ ಗುಣಮುಖರಾಗುತ್ತೀರಿ. ಆಗ ನೀವು ನಿಶ್ಚಿಂತೆಯಿಂದ ಆಸ್ಪತ್ರೆಯಿಂದ ಹೊರ ನಡೆಯಬಹುದು'' ಅಪ್ಪಾ ಸಾಹೇಬರು ನಿಟ್ಟುಸಿರು ಬಿಟ್ಟರು.

ಕೊಳೆಗೇರಿ ಜನಗಳ ಪುನರ್ವಸತಿ ಪ್ರಾಧಿಕಾರ(ಸ್ಲಮ್ ರಿಹ್ಯಾಬಿಲಿಟೇಶನ್ ಅಥಾರಿಟಿ)ದ ಚುಕ್ಕಾಣಿ